(ಇಂದು ದಿನಾಂಕ 12-06-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಡಿ.ಎಸ್.ಬಿ. ವಕೀಲರಿಂದಃ**

ನಮ್ಮ ವಕೀಲರಿಗೆ ಉದಾಹರಣೆ ಸಲ್ಲಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಸ.ನಂ. 188/1 ರ ಪಶ್ಚಿಮ ದಿಕ್ಕಿನ ಪೈಕಿ 10 ಗುಂಟೆ ಜಾಗವನ್ನು ಸದಾಶಿವ ನಾಗಪ್ಪ ನಾಯ್ಕ ರವರಿಗೆ 2010 ರಲ್ಲಿ ಮಾರಾಟ ಮಾಡಿರುತ್ತೇನೆ. ಸದಾಶಿವ ನಾಗಪ್ಪ ನಾಯ್ಕರವರಿಗೆ ಸದರಿ ಜಾಗವನ್ನು ಮಾರಾಟ ಮಾಡುವ ಪೂರ್ವದಲ್ಲಿ ಮೋಜಣಿಯನ್ನು ಮಾಡಿಸಿರುತ್ತೇನೆ. ಮೋಜಣಿ ಮಾಡಿಸಿರುವ ನಕಾಶೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಹಾಜರು ಪಡಿಸಲು ತೊಂದರೆ ಇರಲಿಲ್ಲ. ದಾವಾ ದಾಖಲು ಮಾಡಿದ ನಂತರ ದಿಃ 04-10-2018 ರಂದು ನಾನು 0-09-08 ಜಾಗವನ್ನು ಶೇಷು ನಾಯ್ಕ ರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಸಲ್ಲಿಸುವ ಪೂರ್ವದಲ್ಲಿ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಸ.ನಂ. 188/1 ರ ಪೂರ್ವ ದಿಕ್ಕಿನ ಪೈಕಿ 0-09-08 ಜಾಗವನ್ನು ಶೇಷು ನಾಯ್ಕರವರಿಗೆ ಮಾರಾಟ ಮಾಡಿರುತ್ತೇನೆ. ಮಾರಾಟ ಮಾಡುವ ಪೂರ್ವದಲ್ಲಿ ಮೋಜಣಿ ಮಾಡಿಸಿರುತ್ತೇನೆ. ಶೇಷು ನಾಯ್ಕ ರವರಿಗೆ ಮಾರಾಟ ಮಾಡುವ ಪೂರ್ವದಲ್ಲಿ ಮೋಜಣಿ ಮಾಡಿದ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದಾಶಿವ ನಾಗಪ್ಪ ನಾಯ್ಕ ಮತ್ತು ಶೇಷು ನಾಯ್ಕ ರವರಿಗೆ ಮಾರಾಟ ಮಾಡಿದ ನಂತರ ನನ್ನ ತಾಬಾದಲ್ಲಿ 34 ಗುಂಟೆ ಜಾಗ ಉಳಿದಿರುತ್ತದೆ. ಸದರಿ 34 ಗುಂಟೆ ಜಾಗದಲ್ಲಿ 2 ಗುಂಟೆ ಜಾಗವನ್ನು ಸುಮಾರು 15 ವರ್ಷಗಳ ಹಿಂದೆ ಬಿನ್ ಶೆತ್ಕಿ ಮಾಡಿರುತ್ತೇನೆ. ಬಿನ್ ಶೆತ್ಕಿ ಮಾಡುವ ವೇಳೆಗೆ ಮೋಜಣಿಯನ್ನು ಮಾಡಿಸಿರುತ್ತೇನೆ. ಅದರ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸ.ನಂ. 188/1 ರ ಪೂರ್ವ ದಿಕ್ಕಿಗೆ ದಾವಾ ಆಸ್ತಿಯ ಸ.ನಂ. 188/2 ಇರುತ್ತದೆ. ಶೇಷು ನಾಯ್ಕ ರವರಿಗೆ

ಡಿ.ಡಬ್ಲ್ಯು 1

ದಿಃ 04-10-2018 ರಂದು ನಾನು 0-09-08 ಜಾಗವನ್ನು ಮಾರಾಟ ಮಾಡುವ ವೇಳೆಗೆ ಮೋಜಣಿ ಮಾಡಿಸುವಾಗ ಮೋಜಣಿ ಇಲಾಖೆಯವರು ನನಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ ಮತ್ತು ವಾದಿಯವರಿಗೆ ನೋಟೀಸನ್ನು ನೀಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಸದಾಶಿವ ನಾಯ್ಕ ಮತ್ತು ಶೇಷು ನಾಯ್ಕ ರವರಿಗೆ ಮಾರಾಟ ಮಾಡಿದ ನಂತರ ಸ.ನಂ. 188/2 ಮತ್ತು 188/1 ನ್ನು ಜಂಟಿಯಾಗಿ ಮೋಜಣಿ ಮಾಡಿಸಿರುವುದಿಲ್ಲ.

ಪ್ರಕರಣ ನಂ. ಕೆ ಎಂ ಟಿ ಬಿ ಎನ್ ಡಿ 260/2017-18 ನೇ ಸಾಲಿನಲ್ಲಿ ಭೂಮಾಪಕರು ವಾದಿ ಮತ್ತು ನನಗೆ ಮೋಜಣಿ ಮಾಡಲು ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿ. ಮೋಜಣಿ ಮಾಡಿದ ನಂತರ ನಾನು ಮತ್ತು ವಾದಿಯರು ಮೋಜಣಿ ಮಾಡಿದ್ದು ಸರಿ ಇದೆ ಎಂದು ಸಹಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ಮೋಜಣಿ ಮಾಡಿದ ಸರ್ವೆ ನಕಾಶೆಯನ್ನು ಮೋಜಣಿ ಮಾಡಿದ 2 ತಿಂಗಳ ಬಳಿಕ ನಾನು ಭೂಮಾಪಕ ಇಲಾಖೆಯಿಂದ ಪಡೆದುಕೊಂಡಿರುತ್ತೇನೆ. ಸದರಿ ನಕಾಶೆಯಲ್ಲಿ ವಾದಿಯರ 5 ಗುಂಟೆ ಜಾಗವನ್ನು ನಾನು ಅತಿಕ್ರಮಣ ಮಾಡಿರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ಅದರ ವಿರುದ್ಧ ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ